**ಕರ್ನಾಟಕ ಸರ್ಕಾರ**

**(ವಾಣಿಜ್ಯ ತೆರಿಗೆಗಳ ಇಲಾಖೆ)**

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ) ಮೌ.ತೆ.ವಿ-3, ಕೊಠಡಿ
ಸಂಖ್ಯೆ: 205, 2ನೇ ಮಹಡಿ, ಟಿ.ಟಿ.ಎಂ.ಸಿ. ಬಿ-ಬ್ಲಾಕ್, ಶಾಂತಿನಗರ,
ಬೆಂಗಳೂರು-560027. ದೂರವಾಣಿ: 080-22221048, ಫ್ಯಾಕ್ಸ್: 080-22221184.

ಸಂಖ್ಯೆ : ವಾ.ತೆ.ಜಂ.ಆ(ಆ)/ಡಿ.ವಿ.ಓ-3/ಎಫ್3/ಸಿ.ಆರ್- 04/2016-17 ದಿನಾಂಕ: 19/05/2016

## ಟೆಂಡರ್ ಅಧಿಸೂಚನೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌ.ತೆ.ವಿ-3, ಶಾಂತಿನಗರ, ಬೆಂಗಳೂರು-27 ಈ ವಿಭಾಗದ ಉಪಯೋಗಕ್ಕಾಗಿ ಒಟ್ಟು 14 ವಾಹನಗಳ ಸೇವೆಯ ಅಗತ್ಯತೆ ಇರುತ್ತದೆ. ಆದುದರಿಂದ, ಅಂಗೀಕೃತ ಟ್ರಾವೆಲ್ ಏಜೆನ್ಸಿ / ಸಂಸ್ಥೆ / ಸ್ವಂತ ವಾಹನಗಳನ್ನು ಹೊಂದಿರುವ ಹಾಗೂ ತಾವೇ ಆ ವಾಹನಕ್ಕೆ ಚಾಲಕರಾಗಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ವಾಹನಗಳಿಗೆ ಸಂಬಂಧಪಟ್ಟ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸುವುದು. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 96 ಶೀವಾನಿ 2012 ದಿನಾಂಕ: 23/8/2012 ರಲ್ಲಿ ತಿಳಿಸಿರುವ ನಿಯಮಗಳನ್ವಯ, 2011 ಮತ್ತು ನಂತರದ ಮಾದರಿಯ Yellow board Taxi (Tata Indica/Vista, Maruthi Swift, Toyata Liva & any other Hatch back vehicles) ವಾಹನಗಳ ಸೇವೆಯನ್ನು ಮಾತ್ರ ಪಡೆಯಲಾಗುವುದು. ವಾಹನ ಮಾಲೀಕ/ಚಾಲಕರಿಗೆ ಮಾಸಿಕ ರೂ. 25,000/- ಗುತ್ತಿಗೆ ಮೊತ್ತ ನೀಡಿಕೆ. ಆಧಾರದ ಮೇಲೆ ಪಡೆಯಲು ನಿಶ್ಚಯಿಸಲಾಗಿರುತ್ತದೆ. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. (1)**ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27/05/2016 ರ ಸಮಯ ಸಂಜೆ 4.30 ಗಂಟೆ (2) ಟೆಂಡರ್‌ನ ಬಿಡ್ಡಿನ ಲಕೋಟೆ ತೆರೆಯುವ ದಿನಾಂಕ: 28/05/2016 ರ ಸಮಯ ಸಂಜೆ 4.00 ಗಂಟೆ (3) ಟೆಂಡರ್‌ನ ಅವಧಿ ದಿನಾಂಕ: 01.06.2016 ರಿಂದ 31.03.2017 ರವರೆಗೆ,** ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ನೇರವಾಗಿ/ ದೂರವಾಣಿ ಸಂಖ್ಯೆ: 080-22221048 ಮೂಲಕ ಇಲ್ಲವೇ ಇಲಾಖೆಯ ಅಂತರ್ಜಾಲ http:/ctax.kar.nic.in ಮುಖಾಂತರ ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

ಸಹಿ/-

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ಮೌಲ್ಯ ವರ್ಧಿತ ತೆರಿಗೆ ವಿಭಾಗ-3, ಬೆಂಗಳೂರು.

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ) ಮೌ.ತೆ.ವಿ–3, ಕೊಠಡಿ
ಸಂಖ್ಯೆ: 205, 2ನೇ ಮಹಡಿ, ಟಿ.ಟಿ.ಎಂ.ಸಿ. ಬಿ–ಬ್ಲಾಕ್, ಶಾಂತಿನಗರ,
ಬೆಂಗಳೂರು–560027. ದೂರವಾಣಿ: 080–22221048, ಫ್ಯಾಕ್ಸ್: 080–22221184.

## ಖಾಸಗಿ ವಾಹನ ಮಾಲಿಕ / ಚಾಲಕರ ಹೊರಗುತ್ತಿಗೆ ಸೇವೆ ಪಡೆಯುವ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳು

### ಅ) ಟೆಂಡರ್ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು

1. ಅರ್ಜಿದಾರರ ಹೆಸರು, ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು – 2
2. ವಿಳಾಸದ ದಾಖಲೆ (ಮತದಾರರ ಗುರುತಿನ ಚೀಟಿ/ರೇಷನ್ ಕಾರ್ಡ್/ಆಧಾರ್ ಕಾರ್ಡ್/ಪಾಸ್ ಪೋರ್ಟ್ ಅಥವಾ ಚುನಾವಣಾ ಆಯೋಗ ಮತದಾನ ಪ್ರಕ್ರಿಯೆಗೆ ಅನುಮತಿಸುವ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ)
3. ವಾಹನದ ನೋಂದಣಿ ಪುಸ್ತಕದ ಪ್ರತಿ
4. ವಾಹನದ ವಿಮಾ ಪಾಲಿಸಿಯ ಪ್ರತಿ
5. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ
6. ರಸ್ತೆ ತೆರಿಗೆಯನ್ನು (Road Tax) ಸಂಬಂಧಿಸಿದ ಇಲಾಖೆಗೆ ಪಾವತಿಸಿರುವ ವಿವರದ ಪ್ರತಿ
7. ವಾಯು ಮಾಲಿನ್ಯ ಇಲಾಖೆಯವರು ನೀಡುವ ಪ್ರಮಾಣ ಪತ್ರ.

### ಆ) ಟೆಂಡರ್ ಪ್ರಕಟಣೆಯ ಷರತ್ತು ಮತ್ತು ನಿಬಂಧನೆಗಳು

8. ಈ ಟೆಂಡರ್ ಅಧಿಸೂಚನೆಯಲ್ಲಿ ಇರುವ ಷರತ್ತುಗಳಲ್ಲದೇ ಸುಗಮ ಸೇವೆಯ ನಿರ್ವಹಣೆಗಾಗಿ ಬೇಕಾಗುವ ಇತರೆ ಯಾವುದೇ ಷರತ್ತುಗಳನ್ನು ವಿಧಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಇಲಾಖೆಯ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ–3, ಶಾಂತಿನಗರ, ಬೆಂಗಳೂರು–560027 ಇವರು ಹೊಂದಿರುತ್ತಾರೆ.

9. ಅರ್ಹಗೊಂಡು ಆಯ್ಕೆಯಾದ ವಾಹನ ಮಾಲೀಕರು ತಮಗೆ ನೀಡಿದ ಕಾರ್ಯಾದೇಶದಂತೆ ಕಾರ್ಯನಿರ್ವಹಿಸದಿದ್ದಲ್ಲಿ ಇವರ ಸೇವೆಯನ್ನು ಯಾವುದೇ ಮುನ್ಸೂಚನೆ ಇಲ್ಲದೇ ರದ್ದು ಪಡಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಇಲಾಖೆಯ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ–3, ಶಾಂತಿನಗರ, ಬೆಂಗಳೂರು–560027 ಇವರು ಹೊಂದಿರುತ್ತಾರೆ.

10. ಅನಾರೋಗ್ಯವೂ ಸೇರಿದಂತೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ತಿಂಗಳಲ್ಲಿ ಎರಡು ದಿನ ಮಾತ್ರ ಕಛೇರಿ ಮುಖ್ಯಸ್ಥರಿಂದ / ಹಂಚಿಕೆಯಾದ ಅಧಿಕಾರಿಯವರಿಂದ ಅಥವಾ ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯವರಿಂದ ಅನುಮತಿ ಪಡೆದು, ಮಾಲೀಕ– ಚಾಲಕರು ರಜೆ ಪಡೆಯಬಹುದು. ಆ ಅವಧಿಯಲ್ಲಿ ಬದಲಿ ವಾಹನದ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಲೇಬೇಕು. ಈ ಬದಲಿ ವ್ಯವಸ್ಥೆಯು ರಜೆ ಅವಧಿಗೆ ಪೂರ್ಣಪ್ರಮಾಣದಲ್ಲಿ ಇರತಕ್ಕದ್ದು. ಇಲ್ಲದಿದ್ದರೆ, ಗೈರುಹಾಜರಿ ದಿವಸದ ಬಾಡಿಗೆ ಕಡಿತಗೊಳಿಸಲಾಗುವುದು. ಜೊತೆಗೆ ಸಾರ್ವತ್ರಿಕ ರಜೆ ದಿನಗಳಲ್ಲಿ ಅಗತ್ಯ ಬಿದ್ದಾಗ ತುರ್ತು ಕೆಲಸಗಳ ಸಂದರ್ಭಗಳಲ್ಲಿ ವಾಹನ ಚಾಲಕರು ಹೆಚ್ಚುವರಿ ಬಾಡಿಗೆಯನ್ನು ನಿರೀಕ್ಷಿಸದೆ ಕಛೇರಿ ಕರ್ತವ್ಯ ನಿರ್ವಹಿಸಲು ಸಿದ್ದರಿರಬೇಕು.